ಶ್ರೀ ಎಂ. ರಾಜಶೇಖರಮೂರ್ತಿ:– ನಾವು ಈಗಾಗಲೇ ಕಮಿಟಿಯನ್ನು ರಚನೆ ಮಾಡಿ ಕಮಿಟಿಯವರು ಮೀಟಿಂಗನ್ನು ನಡೆಸಿದ್ದಾರೆ. ನಾಳೆ ಫೈನಲ್ ಮೀಟಿಂಗ್ ಇದೆ, ಮೀಟಿಂಗ್ ಆದ ಮೇಲೆ ಅವರ ರೆಕಮಂಡೇಷನ್ ಏನು ಬರುತ್ತದೆ ಅದರ ಬೇಸಿಸ್ ಮೇಲೆ ಒಂದು ಮಸೂದೆ ತಯಾರು ಮಾಡಿ ಈ ಮನೆಯ ಮುಂದೆ ಇಡುತ್ತೇವೆ. ಮಾನ್ಯ ಸದಸ್ಯರು ಜಾಗ್ರತೆ ಬರಬೇಕೆಂದು ಕೇಳುತ್ತಾರೆ, ಅದು ನನ್ನ ಅಭಿಪ್ರಾಯದಲ್ಲಿ ಇದ್ದರೂ ಒಂದೇ ಇಲ್ಲದೆ ಇದ್ದರೂ ಒಂದೇ. ಆದರಿಂದ ಏನೂ ಪರ್ಪಸ್ ಸರ್ವ್ ಆಗಿಲ್ಲ. ಈ ಕಾಯಿದೆ ಇರುವುದರಿಂದ ಹೊಸದಾಗಿ ಯಾರೂ ಮನೆಕಟ್ಟಿ ಬಾಡಿಗೆಗೆ ಯಾರೂ ಕೊಡುವುದಕ್ಕೆ ತಯಾರು ಇಲ್ಲ. ಏಕೆಂದರೆ ಅದಕ್ಕೆ ಇನ್ವೆಸ್ಟ್‌ಮೆಂಟ್ ಮಾಡಿದರೆ ಒಂದು ಪರ್ಸೆಂಟ್ ಬಡ್ಡಿ ಸಿಕ್ಕುವುದಿಲ್ಲ. ಬ್ಯಾಂಕಿಗೆ ಹಾಕಿದರೆ 10 ಪರ್ಸೆಂಟ್ ಆದರೂ ಬರುತ್ತದೆ.

ಅಧ್ಯಕ್ಷರು:– ಮಾನ್ಯ ಬಸವರಾಜರವರೇ ತಮ್ಮ ಪ್ರಶ್ನೆ ಸಂಖ್ಯೆ: 1755 ನ್ನು ಮುಂದೂಡಲಾಗಿದೆ. ಮಾನ್ಯ ಮಂತ್ರಿಗಳು ವಿನಂತಿ ಮಾಡಿಕೊಂಡಿದ್ದಾರೆ. ಅವರು ತುರ್ತಾದ ಕೆಲಸದ ಮೇಲೆ ಹೋಗಿರುವುದರಿಂದ ನಿಮ್ಮ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ.

ಶ್ರೀ ಬಸವರಾಜ್:– ನನ್ನದು ಯಾವುದೂ ಪ್ರಶ್ನೆಗಳು ಬರಲಿಲ್ಲ.

ಅಧ್ಯಕ್ಷರು:– ಈಗ ನನಗೆ ಒಂದು 10 ನಿಮಿಷದ ಕೆಳಗಡೆ ಹೇಳಿ ಹೋದರು.

ಶ್ರೀ ಬಸವರಾಜ್:– ಆಮೇಲೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು:– ಆಮೇಲೆ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಮಾನ್ಯ ರುದ್ರಪ್ಪನವರೇ ತಮ್ಮ ಪ್ರಶ್ನೆ ಸಂಖ್ಯೆ 1910. 15 ದಿವಸ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಎಸ್. ರುದ್ರಪ್ಪ:– 15 ದಿವಸದೊಳಗೆ ಅಸೆಂಬ್ಲಿ ಮುಗಿದು ಹೋಗುತ್ತದೆ. ಮೊನ್ನೆ ತಾನೇ ನಮ್ಮದೊಂದು ಪ್ರಶ್ನೆ ಹೀಗೆಯೇ ಆಯಿತು ಮಾನ್ಯ ಹಾಲಪ್ಪನವರು ಆಗ ಇರಲಿಲ್ಲ. ಈವತ್ತು ಕೂಡ ಹೀಗೆ ಆಯಿತು. ಬರುವುದೇ ನಮ್ಮದು ಅಪರೂಪಕ್ಕೆ ಒಂದು ಪ್ರಶ್ನೆ. ಈ ರೀತಿ ಮಾಡಿದರೆ ಹೇಗೆ ?

ಶ್ರೀ ವಿಜಯಕುಮಾರ್ ಶೆಟ್ಟಿ:– ಕೆಲವರದ್ದು ಪ್ರಶ್ನೆಯನ್ನು ಹಾಕಿದರೆ ಬರುವುದೇ ಇಲ್ಲ.

ಶ್ರೀ ಎಸ್. ರುದ್ರಪ್ಪ:– ಮಾನ್ಯ ಸಹಕಾರ ಮಂತ್ರಿಗಳಿಗೆ ಯುವಕರ ಮೇಲೆ ಹೆಚ್ಚಿಗೆ ಗಮನ ಇಲ್ಲ ಎಂದು ಕಾಣುತ್ತದೆ.

ಶ್ರೀ ವಿಜಯಕುಮಾರ್ ಶೆಟ್ಟಿ:– ಕೆಲವರದ್ದು ಹತ್ತಾರು ಪ್ರಶ್ನೆಗಳು ಬರುತ್ತವೆ. ನಮ್ಮದು ಒಂದೂ ಕೂಡ ಬರುವುದಿಲ್ಲ.

ಸಹಕಾರ ಇಲಾಖೆಯಲ್ಲಿ ನಿಯೋಜಿತ ಸೇವೆಯಲ್ಲಿರುವವರ ಸಂಖ್ಯೆ

328 (1693): ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):-

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಹಕಾರ ಇಲಾಖೆಯ ಸಹಾಯಕ ನಿಬಂಧಕರ (ಎ.ಆರ್.ಸಿ.ಎಸ್) ಹುದ್ದೆಯಿಂದ ಹಿಡಿದು ಅಧಿಕ ನಿಬಂಧಕರ ಹುದ್ದೆಯವರೆಗೆ ಅಂದರೆ ಡಿ.ಆರ್.ಸಿ.ಎಸ್., ಜೆ.ಆರ್.ಸಿ.ಎಸ್, ಅಧಿಕ ಆರ್.ಸಿ.ಎಸ್.,ವರೆಗೆ ನಿಯೋಜಿತ ಸೇವೆಯ ಮೇಲೆ ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳ ಹುದ್ದೆ ಎಷ್ಟು;

ಆ. ಅವರುಗಳಿಗೆ ನಿಯೋಜಿಸಿರುವ ನೌಕರಿಯ (ಹುದ್ದೆ) ವಿವರಗಳೇನು ಹಾಗೂ ಅವರುಗಳ ಅವಶ್ಯಕತೆಯನ್ನು ಅನಿವಾರ್ಯವೆಂದು ಭಾವಿಸಲಾಗುವುದೇ;

ಇ. ಅವರುಗಳಿಗೆ ಬದಲಾಗಿ ಈ ಕಾಲಕ್ಕೆ ಹೊಂದುವಂತಹ ವಿದ್ಯಾರ್ಹತೆ ಹಾಗೂ ಅನುಭವ ಇರುವ ಬೇರೆ ಅಧಿಕಾರಿಗಳನ್ನು ಸಂಸ್ಥೆಗಳು ನೇಮಕ ಮಾಡಿಕೊಂಡಲ್ಲಿ ಸಂಸ್ಥೆಗಳಿಗೆ ಒಳಿತಾಗುವುದಿಲ್ಲವೆ;

ಈ. ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟ ಹಾಗೂ ಮಹಾಮಂಡಲದಲ್ಲಿ ಇಂತಹ ಅಧಿಕಾರಿಗಳು ಮಾಡುತ್ತಿರುವ ಕೆಲಸಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಸಹಕಾರ ಸಂಘಗಳ ಸಹಾಯಕ ನಿಬಂಧಕರ ಹುದ್ದೆಯಿಂದ ಅಪರ ನಿಬಂಧಕರ ಹುದ್ದೆಯವರೆಗೆ 152 ಅಧಿಕಾರಿಗಳು ನಿಯೋಜಿತ ಸೇವೆಯ ಮೇಲೆ ಬೇರೆ ಬೇರೆ ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ. ಅಧಿಕಾರಿಗಳ ಹುದ್ದೆಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕಾರ್ಯದರ್ಶಿ, ಪ್ರಧಾನ: ಮುಖ್ಯ ವ್ಯವಸ್ಥಾಪಕರು, ವ್ಯವಸ್ಥಾಪಕರು, ಆಂತರಿಕ ಲೆಕ್ಕ ಪರಿಶೋಧಕರು ಎಂದು ವರ್ಗೀಕರಿಸಿ ಈ ಹುದ್ದೆಗಳ ಕಾರ್ಯ ವಿವರಗಳನ್ನು ಆಯಾ ಸಹಕಾರ ಸಂಘಗಳ ಉಪನಿಯಮಗಳಲ್ಲೇ ಅಡಕವಾಗಿರುತ್ತವೆ. ಸದರಿ ಹುದ್ದೆಗಳು ಸರ್ಕಾರದಿಂದ ಸಂವರ್ಗೀಕೃತವಾಗಿರುತ್ತೆ ಅಥವಾ ಸಂಸ್ಥೆಯ ಕೋರಿಕೆಯ ಮೇರೆಗೆ ಸರ್ಕಾರದಿಂದ ಸೃಷ್ಟಿಸಿರುತ್ತೆ.

ಈ ಅಧಿಕಾರಿಗಳ ಅವಶ್ಯಕತೆ ಸಂಸ್ಥೆಗಳ ಕಾರ್ಯ ವ್ಯವಹಾರವು ಸುಸೂತ್ರವಾಗಿ ಮತ್ತು ನಿಯಮ ಬದ್ಧವಾಗಿ ನಡೆಯಲು ಅನಿವಾರ್ಯವಾಗಿರುತ್ತೆ ಹಾಗೂ ಆಯಾ ಸಂಸ್ಥೆಗಳ ಆಡಳಿತ ಮಂಡಳಿಯ ಕೋರಿಕೆಯ ಮೇರೆಗೆ ನಿಯೋಜಿಸಲಾಗಿರುತ್ತದೆ.

ಇ. ಸಾಮಾನ್ಯವಾಗಿ ಸಹಕಾರ ಸಂಘಗಳ ಆಡಳಿತವನ್ನು ಈ ಇಲಾಖೆಯ ಅಧಿಕಾರಿಗಳು, ಸಹಕಾರ ಕಾನೂನಿನಡಿಯಲ್ಲಿ ನಿರ್ವಹಿಸುತ್ತಿರುವುದನ್ನು ಮೇಲುಸ್ತುವಾರಿ ಮಾಡುತ್ತಿರುವುದರಿಂದ ಇಲಾಖಾಧಿಕಾರಿಗಳು, ಸಂಘ ಸಂಸ್ಥೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾಗಿರುವುದು ಸೂಕ್ತವಾಗಿರುತ್ತದೆ. ಆದಾಗ್ಯೂ ಸಹಕಾರ ಸಂಘಗಳು ಸ್ವತಂತ್ರವಾಗಿ ಆರ್ಥಿಕ ಸಂಪತ್ತನ್ನು ಹೊಂದಿದ್ದು, ಸದಸ್ಯರಿಗೆ ತನ್ನ ಮೂಲೋದ್ದೇಶಗಳನ್ನು ಸಮರ್ಪಕವಾಗಿ ಪೂರೈಸುತ್ತಿದ್ದಲ್ಲಿ, ತಮಗೆ ಅಗತ್ಯ ಕಂಡ ಇತರೇ ಅಧಿಕಾರಿಗಳನ್ನು ಕಾನೂನು ಪ್ರಕಾರ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ.

ಈ. ಹಾಲು ಉತ್ಪಾದಕರ ಒಕ್ಕೂಟ ಹಾಗೂ ಮಹಾಮಂಡಲದಲ್ಲಿ ಅಧಿಕಾರಿಗಳು ತಮ್ಮ ಹುದ್ದೆಯನುಸಾರ ಪ್ರಾಥಮಿಕ ಹಾಲು ಉತ್ಪಾದಕರ ಸಂಘಗಳಲ್ಲಿ ಆಡಳಿತಾತ್ಮಕ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಇದಲ್ಲದೆ ಇಲಾಖಾಧಿಕಾರಿಗಳು ತಮ್ಮ ಹುದ್ದೆಯನುಸಾರ, ಪ್ರಾಥಮಿಕ ಸಹಕಾರ ಸಂಘಗಳ ನೋಂದಣಿ, ಇವುಗಳ ತಪಾಸಣೆ ಪರಿವೀಕ್ಷಣೆ ಇವುಗಳನ್ನು ನಿರ್ವಹಿಸುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅದು ಸಮರ್ಪಕವಾಗಿಲ್ಲ. ಇದರಲ್ಲಿ ಡೆಪ್ಯೂಟೇಷನ್ ಕೊಡುತ್ತಿದ್ದೀರಿ. ಸ್ಪಿನ್ನಿಂಗ್ ಸೊಸೈಟಿ ಇರಬಹುದು ಷುಗರ್ ಮಿಲ್ ಇರಬಹುದು, ಡೈರಿ ಇರಬಹುದು, ಡಿ.ಸಿ.ಸಿ. ಬ್ಯಾಂಕ್ ಇರಬಹುದು ನಿಮ್ಮ ಕೋ–ಆಪರೇಟಿವ್ ಆಫೀಸರ್ಸ್ ಹೋಗಿ ಅಲ್ಲಿ ಸುಮ್ಮನೆ ಕಾಲವನ್ನು ಕಳೆದುಕೊಂಡು ಬರುತ್ತಾರೆ. ಅದರ ಬದಲು ಯಾರಾದರೂ ಟೆಕ್ನಿಕಲ್ ಕ್ವಾಲಿಫೈಡ್ ಆದವರನ್ನು ಹಾಕುವುದಕ್ಕೆ ಆಗುವುದಿಲ್ಲವೇ ಎಂದು ಕೇಳಿದ್ದೆ. ಅದಕ್ಕೆ ತಾವು ಏನೂ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಡೈರಿಗಳಲ್ಲಿ

ಅವರು ಏನು ಕೆಲಸ ಮಾಡುತ್ತಾರೆ. ಅವರು ಶಾಸನಬದ್ಧ ಕೆಲಸ ಮಾಡುತ್ತಾರೆಂದು ಹೇಳಿದ್ದೀರಿ. ಇದು ನಿಜವಲ್ಲ, ಸುಳ್ಳು, ನಾನು ಡೈರಿಯ ಅಧ್ಯಕ್ಷನಾಗಿ ಕೆ.ಎಂ.ಎಫ್. ಛೇರ್ಮನ್ ಆಗಿ ಕೆಲಸ ಮಾಡಿದ್ದೇನೆ. ರಿಜಿಸ್ಟ್ರೇಷನ್ ಇದುವರೆಗೂ ಯಾರಿಗೂ ಮಾಡುವುದಕ್ಕೆ ಅಧಿಕಾರ ಕೊಟ್ಟಿಲ್ಲ. ಎನ್‌ಕ್ವೈರಿ ಮಾಡುವುದಕ್ಕೂ ಅಧಿಕಾರ ಕೊಟ್ಟಿಲ್ಲ. ಸೂಪರ್‌ವಿಷನ್ ಮಾಡುವುದಕ್ಕೆ ಕೊಟ್ಟಿಲ್ಲ. ಲಿಕ್ವಿಡೇಷನ್ನೂ ಮಾಡುವುದಕ್ಕೂ ಕೊಟ್ಟಿಲ್ಲ. ಎಲ್ಲಾ ಡಿಸ್ಟ್ರಿಕ್ಟ್ ಯೂನಿಯನ್‌ಗಳಿಗೂ ಒಬ್ಬೊಬ್ಬರು ಸುಮ್ಮನೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಕುಳಿತಿದ್ದಾರೆ. ಅಡ್ಮಿನಿಸ್ಟ್ರೇಟಿವ್ ಆಫೀಸರ್ಸ್ ಅಂತ ಅವರನ್ನು ಕೊಟ್ಟಿದ್ದರು. ಡೈರಿಗಳನ್ನು ಹ್ಯಾಂಡ್ ಓವರ್ ಮಾಡಿದ ಮೇಲೆ ಅವರಿಗೆ ಲೇಬರ್ ಆಕ್ಟ್ ಗೊತ್ತಿಲ್ಲ. ಬೋನಸ್ ಆಕ್ಟ್ ಗೊತ್ತಿಲ್ಲ. ಇಂಡಸ್ಟ್ರಿ ಆಕ್ಟ್ ಗೊತ್ತಿಲ್ಲ ಅನ್ನುವಂತಹ ಕಾರಣಕ್ಕೆ ಅಡ್ಮಿನಿಸ್ಟ್ರೇಷನ್ ಡೈರಿಯವರು ತೆಗೆದುಹಾಕಿಬಿಟ್ಟಿದ್ದಾರೆ. ಬೇರೆ ಒಳಗಿರುವವರೊಬ್ಬರನ್ನು ಅಡ್ಮಿನಿಸ್ಟ್ರೇಟಿವ್ ಆಫೀಸರ್ ಅಂತ ಮಾಡಿಕೊಂಡಿದ್ದಾರೆ. ಇವರಿಗೆ ಏನೂ ಕೆಲಸ ಇಲ್ಲ. ನನಗೆ ತಿಳಿದ ಮಟ್ಟಿಗೆ ಕ್ಯಾಂಪ್‌ಕೋಗೆ ಒಬ್ಬರನ್ನು ಅಡಿಷನಲ್ ರಿಜಿಸ್ಟ್ರಾರ್‌ರವರನ್ನ ಹಾಕುತ್ತೀರಿ, ಅವರು ಕ್ಯಾಂಪ್‌ಕೋಗೆ ಹೋಗಿ ಏನು ಮಾಡುತ್ತಾರೆ, ಹಾರ್ಟಿಕಲ್ಚರಲ್ ಸೊಸೈಟಿಗೆ ಹಾಕುತ್ತೀರಿ, ಅಲ್ಲಿ ಅವರು ಹೋಗಿ ಏನು ಮಾಡುತ್ತಾರೆ ಗೊತ್ತಾಗಿಲ್ಲ. ದಯಮಾಡಿ ಇದನ್ನು ರೀ ಕನ್ಸಿಡರ್ ಮಾಡಬೇಕು. ಪ್ರಮೋಷನ್ ಕೊಡಬೇಕು ಅಥವಾ ಹುದ್ದೆಯನ್ನು ಸೃಷ್ಟಿ ಮಾಡಬೇಕು ಅಂತ ಒಂದೇ ಕಾರಣಕ್ಕೆ ಕೋ-ಆಪರೇಟಿವ್ ಸೊಸೈಟಿಗಳನ್ನು ಈ ಸ್ಥಿತಿಗೆ ತರಬಾರದು. ಮತ್ತೆ ಡೈರೀದು ಏನಾದರೂ ಸೆಟಲ್‌ಮೆಂಟ್ ಮಾಡುತ್ತೀರಾ ? ಈ ಎರಡಕ್ಕೂ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಯಾವ ಉದ್ದೇಶಕ್ಕಾಗಿ ಹಾಕುತ್ತೇವೆ ಎನ್ನತಕ್ಕದ್ದನ್ನು ಅದರಲ್ಲಿ ಹೇಳಿದ್ದೇನೆ. ಆದರೆ ಅವರು ಇದರಿಂದ ಪ್ರಯೋಜನವಿಲ್ಲ; ಟೆಕ್ನಿಕಲ್ ಪರ್ಸನ್ ಹಾಕಬೇಕು ಎನ್ನತಕ್ಕದ್ದು ಅವರ ವಾದವಾಗಿದೆ. ಎಲ್ಲೆಲ್ಲಿ ಟೆಕ್ನಿಕಲ್ ಪರ್ಸನ್ ಬೇಕು ಅದನ್ನು ಆ ಸೊಸೈಟಿಯವರು ಮಾಡಿಕೊಳ್ಳಬಹುದು ಅದಕ್ಕೆ ಏನೂ ಅಡ್ಡಿ ಇಲ್ಲ.

ಆದರೆ ಇವರು ಅಡ್ಮಿನಿಸ್ಟ್ರೇಟಿವ್ ಮ್ಯಾಟರ್ಸ್, ನೋಂದಣಿ ಕೆಲಸ, ಇನ್ಸ್‌ಪೆಕ್ಷನ್ ಕೆಲಸ ಮಾಡುತ್ತಾರೆ ಎನ್ನತಕ್ಕದ್ದು ಇವತ್ತಿನ ಮಾಹಿತಿಯ ಪ್ರಕಾರ ನನ್ನ ಹತ್ತಿರ ಇದೆ. ಆದರೆ ತಾವು ಅನುಭವದ ಆಧಾರದ ಮೇಲೆ ಇಲ್ಲ ಎಂದು ಹೇಳುತ್ತಿದ್ದೀರಿ. ನಾನು ಇದರ ಬಗ್ಗೆ ಸಂಪೂರ್ಣವಾಗಿ ಎಕ್ಸಾಮಿನ್ ಮಾಡಿಸುತ್ತೇನೆ. ಪತಕ್ಕೆ ಅವರು ತಪಾಸಣೆಯನ್ನು ಮಾಡುತ್ತಿಲ್ಲ. ಎಲ್ಲಿ ತೊಂದರೆ ಇದೆ, ಯಾವುದಾದರೂ ಕಾನೂನಿನ ಅಡಚಣೆ ಇದ್ದರೆ ಅದನ್ನು ಪರಿಶೀಲಿಸಿ ಸೂಕ್ತವಾದಂತಹ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಎಂ.ಡಿ.ಗಳನ್ನು ಹಾಕುತ್ತೀರಿ. ಆ ಸಂಸ್ಥೆ ಏನು ಕೆಲಸ ನಿರ್ವಹಿಸುತ್ತದೆ ಎನ್ನುವುದೂ ಕೂಡ ಅವರಿಗೆ ಗೊತ್ತಿರುವುದಿಲ್ಲ. ಕ್ಯಾಂಪಕೋನಲ್ಲಿ ಹೋಗಿ ಏನು ಮಾಡಬೇಕು, ಹಾರ್ಟಿಕಲ್ಚರಲ್‌ನಲ್ಲಿ ಅವರು ಏನು ಮಾಡಬೇಕು. ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಏನು ಮಾಡಬೇಕು ತಾವೇ ಸ್ವಲ್ಪ ಯೋಚನೆ ಮಾಡಿ.

ತಾವು ಸ್ವಲ್ಪ ಕಾಯಕಲ್ಪ ಮಾಡುತ್ತೀರೆಂದು ಈ ಪ್ರಶ್ನೆ ಹಾಕಿದ್ದೇನೆ. ಈ ಇಲಾಖೆಯವರಂತೂ ಇವರನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಜನ್ಮದಲ್ಲೂ ಒಪ್ಪುವುದಿಲ್ಲವೆಂದು ನನಗೆ ಗೊತ್ತು. 152 ಪೋಸ್ಟ್‌ಗಳನ್ನು ಇಲಾಖೆಯಿಂದ ಆಚೆಕಡೆ ಕೊಟ್ಟುಬಿಟ್ಟು ಈ ಪೋಸ್ಟನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಮುಳುಗಿ ಹೋಗುತ್ತಿರುವ ಟಿಎಪಿಎಂಎಸ್‌ನಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳಿದ್ದಾರೆ. ಟಿಎಪಿಸಿಎಂಎಸ್‌ನಲ್ಲಿ ಏನೂ ಕೆಲಸ ಇಲ್ಲ. ಇವರೆಲ್ಲಾ ಪಕ್ಕಾ ಬಿಳಿ ಆನೆಗಳು. ತಾವು ಏನಾದರೂ ಮರು ಪರಿಶೀಲನೆ ಮಾಡಬೇಕು. ಡೈರಿಯಲ್ಲಂತೂ ಅವಶ್ಯಕತೆ ಇಲ್ಲ. ಅವರಿಗೆ ಅಲ್ಲಿ ಏನೂ ಕೆಲಸವಿಲ್ಲ. ಅವರು ಒಂದೇ

ಒಂದು ಸೊಸೈಟಿ ರಿಜಿಸ್ಟರ್ ಮಾಡಿಲ್ಲ ಮತ್ತು ಅಧಿಕಾರವೂ ಇಲ್ಲ. ನಮ್ಮ ಸ್ಟಾಟ್ಯುಟರಿ ರಿಜಿಸ್ಟ್ರಾರ್ ಮತ್ತು ಸಬ್ ಡಿವಿಜನ್‌ನಲ್ಲಿರುವ ರಿಜಿಸ್ಟ್ರಾರ್ ಮುಂದೆ ನಾವು ಸೊಸೈಟಿ ರಿಜಿಸ್ಟ್ರೇಷನ್‌ಗೆ ಹೋಗಬೇಕು. ಅವರಿಗೆ ಅಧಿಕಾರ ಇದೆ ಎಂದು ಉತ್ತರ ಕೊಟ್ಟರೆ ನಾವು ಎಲ್ಲಿಗೆ ಹೋಗೋಣ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಎಲ್ಲಿಗೂ ಹೋಗಬೇಕಾಗಿಲ್ಲ. ಇಲ್ಲೇ ಇದ್ದಿರೆ ಸಂತೋಷ. ಅವರಿಗೆ ಪವರ್ಸ್ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಅದಕ್ಕೆ ನಾನು ಹೇಳಿದೆ ಅದನ್ನು ನಾನು ಸಂಬಂಧಪಟ್ಟ ಅಧಿಕಾರಿಗೆ ಕರೆಯಿಸಿ, ಏಕೆ ಈ ರೀತಿ ಆಗಿದೆ ಅಥವಾ ಏನಾದರೂ ಕಾನೂನು ಅಡಚಣೆ ಇದ್ದರೆ, ಇದನ್ನು ಸರಿಪಡಿಸತಕ್ಕ ವ್ಯವಸ್ಥೆ ಮಾಡುತ್ತೇನೆ.

ವಿಶ್ವಬ್ಯಾಂಕಿನ ಸಹಾಯದಿಂದ ಗ್ರಾಮಾಂತರ ಕುಡಿಯುವ ನೀರಿನ ಯೋಜನೆ

330 (1758): ಶ್ರೀ ಡಿ. ಹಲಗೇಗೌಡ (ಪಾಂಡವಪುರ):–

ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ವಿಶ್ವಬ್ಯಾಂಕಿನ ಸಹಾಯದಿಂದ ಕೈಗೊಳ್ಳುವ ಮೊದಲ ಕಂತಿನ ಗ್ರಾಮಾಂತರ ಕುಡಿಯುವ ನೀರು ಸರಬರಾಜು ಮತ್ತು ಗ್ರಾಮ ಶುದ್ಧೀಕರಣ ಯೋಜನೆಯು ಯಾವಾಗ ಪ್ರಾರಂಭವಾಗುವುದು;

2. ಇಲ್ಲಿಯವರೆಗೆ ಆಗಿರುವ ಈ ಯೋಜನೆಯ ಕಾರ್ಯಗಳ ಪ್ರಗತಿ ಏನು;

3. ಕೆಲಸ ಪ್ರಗತಿಯಾಗದಿರಲು ಕಾರಣವೇನು ಹಾಗೂ ಎರಡನೇ ಹಂತದ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

4. ಅದನ್ನು ಇನ್ನೂ ಪ್ರಾರಂಭಿಸದಿರುವುದರಿಂದ ತೊಂದರೆಯಲ್ಲಿರುವ ಗ್ರಾಮಗಳಿಗೆ ಇನ್ನೂ ಹೆಚ್ಚಿನ ತೊಂದರೆಯಾಗುವುದಿಲ್ಲವೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು):–

1. 1993-94ರಲ್ಲಿ.

2. ಸುಮಾರು 1300 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. 225 ಹಳ್ಳಿಗಳ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ.

3. ವಿಶ್ವಬ್ಯಾಂಕ್‌ನಿಂದ ಸಾಲದ ನೆರವು 1993ರ ಜುಲೈ ತಿಂಗಳಿನಿಂದ ಪ್ರಾರಂಭವಾಗುವುದೆಂದು ನಿರೀಕ್ಷಿಸಲಾಗಿದೆ. ಆದ ಕಾರಣ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಿರುವುದಿಲ್ಲ. ಯೋಜನೆಯ ಎರಡನೇ ಹಂತವನ್ನು 1995-96ರಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ.

4. ಇಲ್ಲ.

ಶ್ರೀ ಡಿ. ಹಲಗೇಗೌಡ:– ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವುದು ಪ್ರಶ್ನೆ ಕನ್ನಡದಲ್ಲಿ ಅವರು ಉತ್ತರ ಕೊಟ್ಟಿರುವುದು ಇಂಗ್ಲೀಷ್‌ನಲ್ಲಿ. ನನಗೆ ಒಂದೊಂದು ಸಾರಿ ಇಂಗ್ಲೀಷ್ ಅರ್ಥವಾಗುವುದಿಲ್ಲ. ಕನ್ನಡದಲ್ಲಿ ಮಾಡಿದರೆ ಚೆನ್ನಾಗಿತ್ತು. ಅಧ್ಯಕ್ಷರೇ, ತಾವು ಈ ವಿಶ್ವಬ್ಯಾಂಕ್ ಯೋಜನೆಯನ್ವಯ ಗ್ರಾಮಗಳಲ್ಲಿ ಕುಡಿಯುವ ನೀರು ಮತ್ತು ಗ್ರಾಮ ಅಭಿವೃದ್ಧಿ ಕೆಲಸ ತೆಗೆದುಕೊಳ್ಳುವುದಕ್ಕೆ 87ನೇ ಇಸವಿಯಲ್ಲಿ ಮೊದಲನೇ ಹಂತದಲ್ಲಿ ಕೆಲವು ಹಳ್ಳಿಗಳನ್ನು ಆರಿಸಿಕೊಂಡಿದ್ದೀರಿ. ಹಿಂದೆ ಸನ್ಮಾನ್ಯ ಬಸವಲಿಂಗಪ್ಪನವರು ಈ ಇಲಾಖೆಯ ಸಚಿವರಾಗಿದ್ದಾಗ ಈ ಸದನದಲ್ಲಿ ಒಂದು ಹೇಳಿಕೆಯನ್ನು ನೀಡಿದ್ದರು. ಈ ವಿಶ್ವಬ್ಯಾಂಕ್ ಸಹಾಯದಿಂದ ಕೈಗೊಳ್ಳುವ ಮೊದಲ ಕಂತಿನ ಗ್ರಾಮ ಅಭಿವೃದ್ಧಿ